# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಶೆಟ್ಟಿಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.13/ಪಿಆರ್: 10 :2021–22 ದಿನಾಂಕ: 31.10.2021

## ಮಲ್ಲಸಂದ್ರ ವಾರ್ಡ್–13 ರ ವಾರ್ಡ್ ಸಭೆಯ (Ward Decentralized Traige and Emergency Response (DETER) Committee for COVID-19) ನಡವಳಿ

ದಿನಾಂಕ: 31.10.2021 ರಂದು ಬೆಳಗ್ಗೆ 11.30 ಗಂಟೆಗೆ ಶ್ರೀ.ಎಸ್.ಎಲ್. ವಿಶ್ವನಾಥ್, ವಾರ್ಡ್ ಕಮಿಟಿ ನೋಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ಮಲ್ಲಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದವರು:**

1. ಶ್ರೀ. ರುದ್ರಮುನಿ ಆರ್.ಟಿ., ಸಹಾಯಕ ಅಭಿಯಂತರರು, ವಾರ್ಡ್ ನಂ.13 ಮಲ್ಲಸಂದ್ರ.
2. ಶ್ರೀ ಡಾ॥ ದಯಾನಂದ, ಮಲ್ಲಸಂದ್ರ, ಪಿ.ಹೆಚ್.ಸಿ.
3. ಶ್ರೀ. ಪಾರ್ಥ, ಹಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲಸಂದ್ರ
4. ಶ್ರೀ ಲೋಕರಾಜ್, ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5. ಶ್ರೀ ರಾಜ್‌ಕುಮಾರ್, ಕಂದಾಯ ಪರಿವೀಕ್ಷಕರು
6. ಶ್ರೀ ಉಮೇಶ್, ಬೋರ್‌ವೆಲ್ ವಿಭಾಗ.
7. ಶ್ರೀ. ಗೋಪಾಲ್ ರವರು ವಾರ್ಡ್ ಸಮಿತಿ ಸದಸ್ಯರು.
8. ಶ್ರೀ ಬೈಲಪ್ಪ ರವರು ವಾರ್ಡ್ ಸಮಿತಿ ಸದಸ್ಯರು.
9. ಶ್ರೀ ಅಶೋಕ್, ರವರು ವಾರ್ಡ್ ಸಮಿತಿ ಸದಸ್ಯರು
10. ಶ್ರೀ ಮಹಾದೇವ್ ಎಂ. ಮಾರ್ಷಲ್, ಮಲ್ಲಸಂದ್ರ.
11. ಶ್ರೀ ಬಾಲಾಜಿ ಎಂ, ಸೂಪರ್ ವೈಸರ್.
12. ಶ್ರೀ ಅಂಬರೀಶ್ ಡಿ.ಎಲ್. ವಾರ್ಡ್ ಸಮಿತಿ ಸದಸ್ಯರು.

ಶ್ರೀ. ರುದ್ರಮುನಿ ಆರ್.ಟಿ., ಕಾರ್ಯದರ್ಶಿರವರು ವಾರ್ಡ್ ಸಭೆಯಲ್ಲಿ ನೋಡೆಲ್ ಅಧಿಕಾರಿಯಾದ ವಿಶ್ವನಾಥ್ ರವರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರುಗಳಿಗೆ ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

- ಶ್ರೀ ಭೈಲಪ್ಪ ರವರು ಮಾತನಾಡಿ ರವೀಂದ್ರನಗರ 3ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಮುನೇಶ್ವರನಗರ ಕಸ ವಿಲೇವಾರಿ ಸಮರ್ಪಕವಾಗಿ ಆಗದ ಬಗ್ಗೆ ವಾರ್ಡ್ ಸಭೆಯಲ್ಲಿ ಅಸಮಾಧಾನವನ್ನು ವ್ಯಕ್ತಪಡಿಸಿ ಸಭೆಯ ಗಮನಕ್ಕೆ ತಂದರು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮವಹಿಸಿ ವಾರ್ಡ್ ವ್ಯಾಪ್ತಿಯಲ್ಲಿ ಕಸ ವಿಲೇವಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ವಾರ್ಡ್ ಹಿರಿಯ ಆರೋಗ್ಯ ಪರವೀಕ್ಷಕರಿಗೆ ವಾರ್ಡ್ ಕಾರ್ಯದರ್ಶಿರವರು ಸೂಚಿಸಿದರು.



Scanned by CamScanner

- ಶ್ರೀ ಮಂಜುನಾಥ್ ರವರು ಮಾತನಾಡಿ ಕಲ್ಯಾಣನಗರ 5ನೇ ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಒಳಚರಂಡಿ ಸಂಪರ್ಕಕ್ಕೆ ರಸ್ತೆಯನ್ನು ಕತ್ತರಿಸಿದ್ದು, ಕಾಂಕ್ರೀಟ್ ಹಾಕಿ ಕೊಡಲು ಮತ್ತು 5ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲಿನಲ್ಲಿ ಸಮರ್ಪಕವಾಗಿ ಕಸ ವಿಲೇವಾರಿ ಆಗುತ್ತಿಲ್ಲವೆಂದು ತಿಳಿಸುತ್ತಾ ಶೀಘ್ರ ಬಗೆಹರಿಸುವಂತೆ ಕೋರಿರುತ್ತಾರೆ.

- ಶ್ರೀ ಲಕ್ಷ್ಮೀಪತಿರವರು ಮಲ್ಲಸಂದ್ರ ಸರ್ಕಾರಿ ಆಸ್ಪತ್ರೆ ವೃತ್ತದ ಹತ್ತಿರ ಸಮರ್ಪಕವಾಗಿ ಬೆಳಕು ಇಲ್ಲದೇ ಇರುವುದರಿಂದ ಅಪಘಾತಗಳು ಉಂಟಾಗುವ ಸಾಧ್ಯತೆಗಳು ಇರುವುದರಿಂದ ಹೈಮಾಸ್ ಲೈಟ್ ಅಳವಡಿಸಲು ಕೋರಿದರು.

- ಶ್ರೀಮತಿ ಜಯಮ್ಮ ಭೈಲಪ್ಪ ರವರು ಮಾತನಾಡಿ ಎಕನಾಮಿಕಲ್ ವೀಕರ್ಸ್ ಸೆಕ್ಷನ್ ಅನುದಾನದಡಿ ಮನೆ ನಿರ್ಮಾಣಗೊಂಡಿದ್ದು, ಈವರೆವಿಗೂ ಯಾವುದೇ ಬಿಲ್ಲು ನೀಡಿರುವುದಿಲ್ಲ. ಆದ್ದರಿಂದ ಬಿಲ್ಲು ಬಿಡುಗಡೆ ಮಾಡಲು ಕೋರಿದರು.

ಈ ಮೇಲಿನ ಎಲ್ಲಾ ಅಂಶಗಳನ್ನು ತ್ವರಿತಗತಿಯಲ್ಲಿ ಬಗೆಹರಿಸುವುದಾಗಿ ವಾರ್ಡ್ ಕಾರ್ಯದರ್ಶಿರವರು ತಿಳಿಸಿದರು ಹಾಗೂ ಈ ಹಿಂದೆ ಕೋವಿಡ್ ತುರ್ತು ಪರಿಸ್ಥಿತಿಯಲ್ಲಿ ಸಕ್ರಿಯವಾಗಿ ಕೆಲಸ ನಿರ್ವಹಿಸಿರುವ ಬಗ್ಗೆ ವೈದ್ಯಾಧಿಕಾರಿಗಳಿಗೆ ಈ ಸಭೆಯಲ್ಲಿ ಧನ್ಯವಾದಗಳನ್ನು ತಿಳಿಸುತ್ತಾ ವಾರ್ಡ್ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸದಸ್ಯ ಕಾರ್ಯದರ್ಶಿ<br>ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್ ನಂ. 13, ಮಲ್ಲಸಂದ್ರ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | Vishwanath. S.L<br>ನೋಡಲ್ ಅಧಿಕಾರಿ ಹಾಗೂ<br>ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.13, ಮಲ್ಲಸಂದ್ರ<br>ಮತ್ತು ತಹಶೀಲ್ದಾರ್, ಉಪ ಆಯುಕ್ತರು(ಭೂಸ್ವಾಧೀನ)<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಅಧಿಕಾರಿಗಳ ಮಾಹಿತಿಗಾಗಿ:-

1) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಂದಾಯ ಅಧಿಕಾರಿ (ಶೆ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
11) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 13 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಛೇರಿ ಪ್ರತಿ.



Scanned by CamScanner